# ಸಂತ ಪ್ರೇಮಿ ವೃದ್ಧೆ

ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

ದ್ವಾರಕಾಧಾಮ – ಪರಿವ್ರಾಜಕ ಸಂನ್ಯಾಸಿಯು ತೀರ್ಥಾಟನೆ ಮಾಡುತ್ತಾ ಪೋರ್‌ಬಂದರ್, ಸುದಾಮಪುರಿಯಿಂದ ಸಾಗುತ್ತಾ ದ್ವಾರಕೆಗೆ ಬಂದು ತಲುಪಿದ. ಆ ದಿನಗಳಲ್ಲಿ ರೈಲು ಮಾರ್ಗವು ಜಾಮ್‌ನಗರದ ವರೆಗೆ ಮಾತ್ರ ಇತ್ತು. ಅದನ್ನು ಮುಂದಿನ ದ್ವಾರಕೆಯ ತನಕವೂ ಮುಂದುವರಿಸುವ ತಯಾರಿ ನಡೆಯುತ್ತಿತ್ತು. ಸಾಕಷ್ಟು ತಿರುಗಾಟವಾಗಿತ್ತು, ಶರೀರವೂ ಕುಗ್ಗಿ ಹೋಗಿತ್ತು. ಚಾತುರ್ಮಾಸ್ಯ ಪ್ರಾರಂಭವಾಗುವ ಮುಂಚೆಯೇ ದ್ವಾರಕೆಯನ್ನು ತಲುಪಿ, ಅಲ್ಲೇ ಚಾತುರ್ಮಾಸ್ಯ ನಡೆಸುವ ನಿಶ್ಚಯ ಮಾಡಿದ. ಹಾದಿಯಲ್ಲಿ ಒಬ್ಬ ಅಯೋಧ್ಯೆಯಲ್ಲಿ ವಾಸವಾಗಿದ್ದ ವೈಷ್ಣವ ಸಂತನೂ ಜೊತೆಯಾಗಿ ದ್ವಾರಕೆಯ ತನಕ ಭಿಕ್ಷಾಟನೆ ಮಾಡಿ ತಂದು ಸಂನ್ಯಾಸಿಗೂ ಕೊಡುತ್ತಲಿದ್ದ. ಅವನು ಬಹಳ ಪ್ರಿಯನೂ ಸುಶಿಕ್ಷಿತನೂ ಆಗಿದ್ದ.

ದ್ವಾರಕೆ ತಲುಪಿದಾಗ ಸಂಜೆಯಾಗಲು ಇನ್ನೂ ಸಮಯವಿತ್ತು. ಇಬ್ಬರು ಗೋಮತಿಯಲ್ಲಿ ಸ್ನಾನ ಮಾಡಿ ಶ್ರೀಮೂರ್ತಿಯ ದರ್ಶನ ಮಾಡಿ, ನಂತರ ರಾತ್ರಿ ತಂಗಲು ಜಾಗವನ್ನು ಹುಡುಕಲು ಪ್ರಾರಂಭಿಸಿದರು. ವೈಷ್ಣವ ಸಂತನಿಗಾದರೋ ವೈಷ್ಣವರದ್ದೇ ಒಂದು ಸ್ಥಳವಿತ್ತು. ಆದರೆ ಸಂನ್ಯಾಸಿಯ ಚಾತುರ್ಮಾಸ್ಯದ ವಿಚಾರ ತಿಳಿಯುತ್ತಲೇ ಅಲ್ಲಿಯವರು ಅವನು ಅಲ್ಲಿ ಉಳಿದುಕೊಳ್ಳುವುದನ್ನು ನಿರಾಕರಿಸಿಬಿಟ್ಟರು.

ಶಾರದಾ ಮಠ – ಶ್ರೀ ಶಂಕರಾಚಾರ್ಯರ ಒಂದು ಪೀಠ ಸ್ಥಾನ ಮತ್ತು ಸಂನ್ಯಾಸಿಗಳಿಗಾಗಿ ಒಂದು ಜಾಗವೂ ಮೀಸಲಾಗಿತ್ತು. ಆದರೆ ಅಲ್ಲಿನ ಅವ್ಯವಸ್ಥೆಯು ತಲೆ ತಗ್ಗಿಸುವಂತಿತ್ತು. ಪೀಠಾಧೀಶರೇನೂ ಇರಲೇ ಇಲ್ಲ, ಮತ್ತು ಅಲ್ಲಿನ ವ್ಯವಸ್ಥಾಪಕನೂ ಬಹಳ ತುಚ್ಛವಾಗಿ ಮಾತನಾಡಿದ. ಹಾಗಾಗಿ ಸಂನ್ಯಾಸಿಯು ಎಲ್ಲೋ ಹೊರಗಡೆಯೇ ರಾತ್ರಿ ಕಳೆಯಲು ನಿಶ್ಚಯಿಸಿದ. ವೈಷ್ಣವ ಸಂತನಿಗೆ ವಿದಾಯ ಹೇಳಲು ಹೋದಾಗ, ಅವನು ''ಇಲ್ಲೇ ಸ್ಮಶಾನದ ಹತ್ತಿರ ಒಂದು ಮಾನವ ನಿರ್ಮಿತ ಗುಹೆಯಿದೆ. ಖಾಲಿಯೇ ಇದೆ ಎಂದು ತೋರುತ್ತದೆ. ಅದನ್ನು ಮಾಡಿದ ಪುಣ್ಯಾತ್ಮ ಸ್ವಲ್ಪ ದಿನಗಳ ಹಿಂದೆಯೇ ದೇವಲೋಕವನ್ನು ಸೇರಿದನಂತೆ. ನದಿಯೂ ಹತ್ತಿರವಿದೆ, ಸಮೀಪದಲ್ಲೇ ಬಾವಿಯೂ ಇದೆ'' ಎಂದ.

ಸರಿ, ಇಬ್ಬರೂ ಹೋದರು ಮತ್ತು ಜಾಗ ಹುಡುಕಲು ಪ್ರಾರಂಭಿಸಿದರು. ನೋಡಿದರೆ ನಿಜವಾಗಿಯೂ ಅದು ಏಕಾಂತ ಮತ್ತು ಸ್ವತಂತ್ರವಾದ ಜಾಗವಾಗಿತ್ತು. ಸಂನ್ಯಾಸಿಗಂತೂ ತುಂಬಾ ಇಷ್ಟವಾಯಿತು. ಮಾನವ ನಿರ್ಮಿತ ಗುಹೆ, ಇಟ್ಟಿಗೆಗಳಿಂದ ನದಿಯ ಮಣ್ಣಿನ ವರೆಗೆ ಸುರಂಗದಂತೆ ಮಾಡಲಾಗಿತ್ತು. ಒಳಗಡೆಯೂ ಮಣ್ಣು ತುಂಬಾ ಇತ್ತು. ವೈಷ್ಣವ ಸಂತನು ಅದನ್ನು ಸ್ವಲ್ಪ ಶುಚಿಗೊಳಿಸಿ, ದೂರದಿಂದ ಮೃದುವಾದ ಮರಳನ್ನು ತನ್ನ ಬಟ್ಟೆಯಲ್ಲಿ ಕಟ್ಟಿಕೊಂಡು ತಂದು ತಂದು ನೆಲಕ್ಕೆ ಹರಡಿದ. ಕಮಂಡಲುವಿನಲ್ಲಿ ಸಿಹಿಯಾದ ನೀರನ್ನು ತುಂಬಿದ, ಯಾಕೆಂದರೆ ಬಾವಿಯ ನೀರು ಉಪ್ಪಾಗಿತ್ತು. ಮತ್ತೆ ಬೆಳಿಗ್ಗೆ ಮಂದಿರದಲ್ಲಿ ಭೇಟಿಯಾಗೋಣ ಎಂದು ಹೇಳಿ ತನ್ನ ಸ್ಥಾನಕ್ಕೆ ಹೊರಟು ಹೋದ.

ಸಂನ್ಯಾಸಿ ಆ ರಾತ್ರಿ ಬಹಳ ಆನಂದದಿಂದ ಕಳೆದ. ಒಂದು ಸಣ್ಣ ಕಿಟಕಿ ಇತ್ತು, ಅದರಿಂದ ನದಿಯ ಮೇಲಿನ ಒಳ್ಳೆಯ ಶೀತಲ ಗಾಳಿ ಬೀಸುತ್ತಿತ್ತು. ಮಾರನೇ ದಿನ ಸ್ನಾನಾದಿಗಳನ್ನು ಮಾಡಿ ಮಂದಿರಕ್ಕೆ ದರ್ಶನ ಪಡೆಯಲು ಹೋದ. ದರ್ಶನ ಸ್ಪರ್ಶನ ಮಾಡಿ ಆನಂದಿತನಾದ. ವೈಷ್ಣವ ಸಂತನೂ ಅಲ್ಲಿಗೆ ಬಂದ. ಇಬ್ಬರೂ ಪ್ರೀತಿಯಿಂದ ಶ್ರೀಕೃಷ್ಣನ ಲೀಲೆಗಳನ್ನು ಕುರಿತು ಮಾತನಾಡಿದರು. ಮಧ್ಯಾಹ್ನದ ಸಮಯವಾದ ಕೂಡಲೇ ಅವನು ತನ್ನ ಜಾಗಕ್ಕೆ ತೆರಳಿದ. ಸಂನ್ಯಾಸಿಯು ಅಲ್ಲೇ ಸ್ವಲ್ಪ ಹೊತ್ತು ಕುಳಿತುಕೊಂಡು ನಂತರ ತನ್ನ ಗುಹೆಯ ಜಾಗಕ್ಕೆ ವಾಪಸಾದ. ಭಿಕ್ಷೆಗೆ ಯಾರೂ ಕರೆಯಲಿಲ್ಲ, ಇವನು ತಾನೇ ಭಿಕ್ಷಾಟನೆಯನ್ನೂ ಮಾಡುತ್ತಿರಲಿಲ್ಲ. ಹಾಗಾಗಿ ದಿನವಿಡೀ ನೀರನ್ನೇ ಕುಡಿದು ಕಾಲ ಕಳೆದ. ಶ್ರೀಕೃಷ್ಣನ ಸ್ಥಾನವಾದ ದ್ವಾರಕೆಯಲ್ಲಿ ಅವನು ಉಪವಾಸ ಇರಬೇಕಾಯಿತು.

ಆದರೆ ಮಾರನೇ ದಿನ ಸ್ನಾನಾದಿಗಳ ನಂತರ ಮಂದಿರಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಬಹಳ ಸುಸ್ತಾಗಿದ್ದ ಕಾರಣ ವಾಪಸ್ ಗುಹೆಗೆ ತೆರಳಿ ಅಲ್ಲೇ ಸುಮ್ಮನೆ ಬಿದ್ದುಕೊಂಡಿದ್ದ. ಬಹುಶಃ ಈ ದ್ವಾರಕಾ ಧಾಮದಲ್ಲೇ ತನ್ನ ದೇಹಾಂತ್ಯವಾಗುತ್ತದೆ ಎಂದೇ ಯೋಚಿಸುತ್ತಿದ್ದ. ಭಗವಂತನ ಇಚ್ಛೆ ಯಾರು ಬಲ್ಲರು? ಇದು ಕ್ಷೇತ್ರವೂ ಹೌದು, ಹತ್ತಿರದಲ್ಲೇ ಸ್ಮಶಾನವೂ ಇದೆ ಎಂದು ವಿಚಾರ ಮಾಡುತ್ತಿದ್ದ.

ಮಧ್ಯಾಹ್ನ ಎರಡು ಅಥವಾ ಮೂರು ಗಂಟೆ ಆಗಿರಬಹುದು, ಇಬ್ಬರು ವೃದ್ಧಮಾತೆಯರು ಒಬ್ಬ ಹುಡುಗನೊಂದಿಗೆ ಅಲ್ಲಿ ಹಾಜರಾದರು. ''ಯಾಕೆ ಸ್ವಾಮಿ, ನೀವು ಇವತ್ತು ಮಂದಿರದಲ್ಲಿ ದರ್ಶನಕ್ಕೆಂದು ಬರಲೇ ಇಲ್ಲ? ನಿನ್ನೆಯೇ ಸ್ವಲ್ಪ ಬಳಲಿದಂತೆ ಕಾಣುತ್ತಿದ್ದಿರಿ... ಆರೋಗ್ಯ ಸರಿಯಾಗಿದೆಯೆ? ಜ್ವರ ಬಂದಿಲ್ಲ ತಾನೆ? ನಿನ್ನೆ ಎಲ್ಲಿ ಊಟ ಮಾಡಿದಿರಿ? ನಮ್ಮ ಕಡೆಗಂತೂ ಬಂದಿರಲಿಲ್ಲ. ಇಲ್ಲಿ ಒಂದೇ ಮೊಹಲ್ಲಾದಲ್ಲಿ ಹೆಚ್ಚಿನ ನಮ್ಮ ಬ್ರಾಹ್ಮಣ ಪುರೋಹಿತರ ಮನೆಗಳಿವೆ. ಊಟಕ್ಕೆ ಅಲ್ಲಿಗೇ ನಮ್ಮ ಮನೆಗೇ ಬಂದುಬಿಡಿ. ಇವತ್ತು ಊಟ ಎಲ್ಲಿ ಮಾಡಿದಿರಿ?'' ಹೀಗೆ ಪ್ರಶ್ನೆಗಳನ್ನು ಕೇಳುತ್ತಾ ಕೇಳುತ್ತಾ ಸಂನ್ಯಾಸಿ ತನ್ನ ಕಮಂಡಲವನ್ನು ತೋರಿಸಿದಾಗ ಉದ್ಗಾರ ತೆಗೆದರು: ''ಓಹೋ ನೀವು ಎರಡು ದಿನಗಳಿಂದ ಏನೂ ತಿಂದಿಲ್ಲ, ಛೆ. ಏಯ್ ಹುಡುಗ, ಓಡಿ ಹೋಗಿ ಅಂಗಡಿಯಿಂದ ಸಿಹಿ ಮತ್ತು ಖಾರ ತಿಂಡಿ ತೆಗೆದುಕೊಂಡು ಬಾ, ಗಾಂಟಿಯಾ (ಖಾರ ಕಡ್ಡಿ)ವನ್ನೂ ತಾ'' ಎಂದು ಹೇಳಿ ಅಂಗಡಿಯಿಂದ ಎಲ್ಲಾ ತರಿಸಿ ಪ್ರೀತಿಯಿಂದ ತಿನ್ನಿಸಿದರು. ನಂತರ ನಿತ್ಯವೂ ವಿಚಾರಿಸಿಕೊಳ್ಳತೊಡಗಿದರು. ಊಟಕ್ಕೆ ಒಳ್ಳೆಯ ವ್ಯವಸ್ಥೆಯನ್ನೂ ಮಾಡಿದರು. ಸಂನ್ಯಾಸಿಯು ಅಲ್ಲೇ ಚೆನ್ನಾಗಿ ಚಾತುರ್ಮಾಸ್ಯ ಮಾಡಿಯೇ ಅಲ್ಲಿಂದ ಬೇರೆಯ ಊರಿಗೆ ತೆರಳಿದ. ಇದರಲ್ಲಿ ಧಾರ್ಮಿಕತೆಯ ಜೊತೆಗೆ ಇತ್ತು – ಮಾನವೀಯತೆ.